## ಕುರಿಗಳಲ್ಲಿ ಪರಾವಲಂಬಿ ಜೀವಿಗಳು

ಕುರಿಗಳ ದೇಹದಲ್ಲಿ ಅನೇಕ ಪ್ರಕಾರದ ಪರಾವಲಂಬಿ ಜೀವಿಗಳು ಜೀವಿಸುತ್ತವೆ, ಇವುಗಳಲ್ಲಿ ಎರಡು ವಿಧ:

1. ಒಳ ಪರಾವಲಂಬಿ ಜೀವಿಗಳು ಮತ್ತು
2. ಹೊರ ಪರಾವಲಂಬಿ ಜೀವಿಗಳು

ಇವು ದೇಹಾಂಗ ಕಾರ್ಯಗಳಿಗೆ ಹಾನಿಕಾರಕ. ಇವು ತಮ್ಮ ಚಲನವಲನದ ಸಾಮರ್ಥ್ಯದಿಂದ ದೇಹದಲ್ಲಿ ಪ್ರವೇಶ ಮಾರ್ಗಗಳನ್ನು ಕಲ್ಪಿಸಿಕೊಂಡು ಬೇಕಾದ ಜಾಗಕ್ಕೆ ಅನಾಯಾಸವಾಗಿ ಹೋಗಬಲ್ಲವು. ಸದೃಢ ದೇಹದಲ್ಲಿ ಯಾವ ಕಾಲಕ್ಕೂ ಪರಾವಲಂಬಿಗಳು ನಿರಾತಂಕವಾಗಿ ಜೀವಿಸಲಾರವು. ಆದರೆ ದೇಹದ ಶಕ್ತಿಯು ಕ್ಷೀಣಿಸಿದಂತೆ ಇವುಗಳ ಬೆಳವಣಿಗೆ ಹೆಚ್ಚಾಗಿ ವಿನಾಶಕಾರ್ಯವು ಹೆಚ್ಚು ತ್ವರಿತವಾಗಿ ಸಾಯುತ್ತದೆ. ರೋಗಗ್ರಸ್ಥ ಕುರಿಗಳು ಮೈ ಹಿಡಿಯದೆ ಮಾಂಸದ ಪ್ರಮಾಣ ಕಡಿಮೆಯಾಗುತ್ತದೆ.

## ಒಳ ಪರಾವಲಂಬಿ ಜೀವಿಗಳು

**ಕುರಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಜಂತು ಹುಳುಗಳು:**

ಅ. ದುಂಡು ಜಂತು ಹುಳು
ಆ. ಲಾಡಿ ಹುಳು
ಇ. ಕಾರಲು ಹುಳು
ಈ. ಆಂಫಿಸ್ಟೋಮ್ ಹುಳುಗಳು



**ಅ. ದುಂಡು ಜಂತು ಹುಳು:** ಸ್ಟ್ರಾಂಗೈಲ್ ಜಾತಿಗೆ ಸೇರಿದ ದುಂಡು ಜಂತು ಹುಳುಗಳು ಗ್ರಂಥಿ, ಉದರ ಹಾಗೂ ಸಣ್ಣ ಕರುಳಿನಲ್ಲಿ ವಾಸಿಸುತ್ತವೆ. ಇವುಗಳು ಸೋಂಕು ಹೊಂದಿರುವ ಹುಲ್ಲುಗಾವಲಲ್ಲಿ ಮೇಯುವುದರಿಂದ ಕುರಿಗಳ ದೇಹವನ್ನು ಪ್ರವೇಶಿಸುತ್ತವೆ. ಈ ಜಂತುಗಳಿರುವ ಕುರಿಗಳಲ್ಲಿ ಅಜೀರ್ಣತೆ ಕಂಡುಬಂದು ಕೃಶವಾಗುವಿಕೆ ಹಾಗೂ ಗದ್ದ ಊದಿಕೊಳ್ಳತೊಡಗುತ್ತದೆ. ಕೂದಲು ಒರಟಾಗುತ್ತದೆ ನಂತರ ಭೇದಿ ಕಂಡುಬರುತ್ತದೆ. ಕೆಲವು ಜಂತು ಹುಳುಗಳು ರಕ್ತ ಹೀರುತ್ತವೆ. ಸೂಕ್ತ ಸಮಯದಲ್ಲಿ ಔಷಧೋಪಚಾರ ಮಾಡದಿದ್ದಲ್ಲಿ ಕುರಿಗಳು ಸಾಯಲೂಬಹುದು.

**ಚಿಕಿತ್ಸೆ ಮತ್ತು ಮುಂಜಾಗ್ರತಾ ಕ್ರಮ:** ಎಲ್ಲಾ ಕುರಿಗಳಿಗೆ ಪಶುವೈದ್ಯರ ಸಲಹೆಯಂತೆ 2–3 ತಿಂಗಳಿಗೊಮ್ಮೆ ಸೂಕ್ತ ಜಂತು ಹುಳುವಿನ ಔಷಧಿ ಕೊಡಿಸಬೇಕು.

**ಆ. ಲಾಡಿ ಹುಳುಗಳು:** ಈ ಹುಳುಗಳು ಕರುಳಿನಲ್ಲಿ ವಾಸಿಸುತ್ತವೆ. ಇವುಗಳು ಅರಬ್ಯಾಟೆಡ್ ನುಸಿಗಳಿಂದ ಹರಡಲ್ಪಡುತ್ತದೆ. ಸಾಮಾನ್ಯವಾಗಿ ಕುರಿ ಮರಿಗಳಲ್ಲಿ ಹೆಚ್ಚು ತೊಂದರೆಯಾಗುತ್ತದೆ. ನಿಶ್ಯಕ್ತಿ, ಅಜೀರ್ಣತೆ ಕಂಡುಬಂದು ಮರಿಗಳ ಬೆಳವಣಿಗೆಗೆ ಅಡ್ಡಿಯುಂಟಾಗುತ್ತದೆ.

**ಚಿಕಿತ್ಸೆ:** ಮರಿಗಳಿಗೆ ಲಾಡಿ ಹುಳುವಿನ ಔಷಧಿಯನ್ನು ಒಂದು ವರ್ಷದೊಳಗೆ ಎರಡು ಬಾರಿ ಕೊಡಿಸಬೇಕು. ಲಾಡಿ ಹುಳು ಕಂಡುಬಂದ ವಯಸ್ಕ ಕುರಿಗಳಿಗೆ ಸೂಕ್ತ ಔಷಧಿ ಕೊಡಿಸಬೇಕು.

**ಇ. ಕಾರಲು ಹುಳುಗಳು:** ಯಕೃತ್ತಿನಲ್ಲಾಗಲಿ ಅಥವಾ ಪಿತ್ತನಾಳಗಳಲ್ಲಾಗಲಿ ಕಾರಲು ಹುಳುಗಳು ವಾಸಿಸುತ್ತವೆ. ಬಸವನ ಹುಳುಗಳ ಸಂಪರ್ಕದಿಂದ ಹರಡಲ್ಪಡುವವು. ಬಸವನ ಹುಳುಗಳು ಸಾಮಾನ್ಯವಾಗಿ ಕೊಳಚೆ ನೀರಿನ ಅಥವಾ ಜೌಗು ಪ್ರದೇಶಗಳಲ್ಲಿ ವಿಶೇಷವಾಗಿರುತ್ತವೆ. ಕಾರಲು ಹುಳುವಿನಿಂದ ನರಳುತ್ತಿರುವ ಕುರಿಗಳಲ್ಲಿ ರಕ್ತ ಹೀನತೆ, ಗದ್ದ, ಕೈ ಕಾಲುಗಳಲ್ಲಿ ಬಾವು ಕಂಡುಬರುತ್ತದೆ. ಕೆಲವೊಮ್ಮೆ ಭೇದಿ ಕಂಡುಬರುತ್ತದೆ ಅಥವಾ ಹುಳುಗಳು ಹೆಚ್ಚಾಗಿದ್ದರೆ ಕುರಿಗಳು ಸಾಯಲೂಬಹುದು. ಈ ಖಾಯಿಲೆ ಬೇಸಿಗೆ ಕಾಲಕದಲ್ಲಿ ಹೆಚ್ಚಾಗಿ ಕಂಡುಬರುವುದು.

**ಚಿಕಿತ್ಸೆ ಮತ್ತು ಮುಂಜಾಗ್ರತಾ ಕ್ರಮ:** ಪಶುವೈದ್ಯರ ಸಲಹೆ ಪಡೆದು ಸೂಕ್ತ ಜಂತು ಹುಳುವಿನ ಔಷಧಿಯನ್ನು 3–4 ತಿಂಗಳಿಗೊಮ್ಮೆ ಕೊಡಿಸಬೇಕು ಹಾಗೂ ಜೌಗು ಪ್ರದೇಶದಲ್ಲಿ ಕುರಿಗಳನ್ನು ಮೇಯಿಸಬಾರದು.

## ಕುರಿಗಳಲ್ಲಿ ಹೊರ ಪರಾವಲಂಬಿಗಳು



ಈ ಹುಳುಗಳು ಸಾಮಾನ್ಯವಾಗಿ ದೊಮ್ಮೆಯಲ್ಲಿ ವಾಸಿಸುತ್ತವೆ. ಕಾರಲು ಹುಳುಗಳಂತೆ ಇವೂ ಕೂಡ ಬಸವನ ಹುಳುಗಳಿಂದ ಹರಡಲ್ಪಡುತ್ತವೆ. ಈ ಹುಳುಗಳ ಮರಿಗಳು ಕುರಿಗಳ ದೇಹ ಪ್ರವೇಶಿಸಿದ ನಂತರ ಕರುಳಿನಲ್ಲಿ ಹೆಚ್ಚಾಗಿ ತೊಂದರೆ ಉಂಟುಮಾಡಿ ಭೇದಿ ಕಂಡುಬರುತ್ತದೆ, ನಂತರ ವಯಸ್ಕ ಹುಳುಗಳು ದೊಮ್ಮೆಯಲ್ಲಿ ಕಂಡುಬರುತ್ತವೆ.

**ಚಿಕಿತ್ಸೆ ಮತ್ತು ಮುಂಜಾಗ್ರತಾ ಕ್ರಮ: ಕಾರಲು ಹುಳುವಿನಂತೆ**

ಒಟ್ಟಿನಲ್ಲಿ ಪರೋಪ ಜೀವಿಗಳಿಂದಾಗುವ ಹಾನಿ ಅಪಾರ. ಜೊತೆಗೆ ಇವುಗಳಿಗೆ ಲಸಿಕೆ ಇಲ್ಲದಿರುವುದರಿಂದ 2–3 ತಿಂಗಳಿಗೊಮ್ಮೆ ಸೂಕ್ತ ಜಂತು ಹುಳುವಿನ ಔಷಧಿ ಕೊಡಿಸುವುದರಿಂದ ಕುರಿಗಳಿಗಾಗುವ ಹಾನಿಯನ್ನು ತಪ್ಪಿಸಬಹುದು. ಈ ಔಷಧೋಪಚಾರದಿಂದ ಮಾಂಸ ಮತ್ತು ಉಣ್ಣೆ ಇಳುವರಿ ಹೆಚ್ಚಾಗುತ್ತದೆ. ಸೂಕ್ತ ಸಮಯದಲ್ಲಿ ಜಂತುನಾಶಕ ಔಷಧಿಗಳ ಬಳಕೆಯಿಂದ ಬರುವ ಲಾಭ ಅಪಾರ.

**ಕುರಿಗಳಲ್ಲಿ ಹೊರ ಪರಾವಲಂಬಿಗಳು:**

**ಕುರಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಹೊರ ಪರಾವಲಂಬಿ ಜೀವಿಗಳೆಂದರೆ:**

1. ಉಣ್ಣೆ 2. ನುಸಿ 3. ಹೇನು 4. ಚಿಗಟ

ಈ ಎಲ್ಲ ಪರಾವಲಂಬಿ ಜೀವಿಗಳು ಕುರಿಗಳ ಚರ್ಮಕ್ಕೆ ಹಾನಿಯನ್ನುಂಟುಮಾಡುತ್ತವೆ. ಕೆಲವು ವೈರಾಣು, ಸೂಕ್ಷ್ಮಾಣು ಹಾಗೂ ಮಲೇರಿಯಾಗಳಂತಹ ಖಾಯಿಲೆಗಳನ್ನೂ ಕೂಡ ಉಣ್ಣೆಗಳು ಕುರಿಗಳಲ್ಲಿ ಹರಡುತ್ತವೆ. ಈ ಹೊರ ಪರಾವಲಂಬಿ ಪೀಡಿತ ಕುರಿಗಳಲ್ಲಿ ಚರ್ಮರೋಗದ ಜೊತೆಗೆ ನಿಶ್ಯಕ್ತಿ ಕಂಡುಬರುತ್ತದೆ. ಇವುಗಳನ್ನು ಹತೋಟಿಗೆ ತರಲು ಪಶುವೈದ್ಯರನ್ನು ಸಂಪರ್ಕಿಸಿ ಸೂಕ್ತ ಕೀಟನಾಶಕ ಔಷಧಿಯನ್ನು ಉಪಯೋಗಿಸಬೇಕು.


**ಲೇಖಕರು**
ಡಾ. ಎಸ್. ವೈ. ಮುಕರ್ತಾಳ
ಸಹ ಸಂಪಾದಕರು
ಶ್ರೀ ಡಿ. ಎಸ್. ಎಂ. ಗೌಡ
ಪ್ರಕಾಶಕರು ಮತ್ತು ಸಂಪಾದಕರು
ಡಾ. ಸರೋಜನಿ ಜೆ ಕರಕಣ್ಣವರ, ಕಾರ್ಯಕ್ರಮ ಸಂಯೋಜಕರು
ಬೆರಳಚ್ಚು : ಸರೋಜ ಬಿ. ತಳವಾರ ವಿನ್ಯಾಸ: ರೇಖಾ ಕೆ.ಎಸ್.



ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಕಾರ್ಯಕ್ರಮ ಸಂಯೋಜಕರು
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ – 581 115
ತಾ: ರಾಣೇಬೆನ್ನೂರು, ಜಿ. ಹಾವೇರಿ
(08373)253524, 94484–95338
ವಿದ್ಯುನ್ಮಾನ ಅಂಚೆ: kvk_haveri@rediffmail.com,
ಅಂತರಜಾಲ: www.kvkhaveri.org



ಪುಟ ವಿನ್ಯಾಸ:
ಡಿಟಿಪಿ ಘಟಕ, ಪ್ರಕಟಣಾ ಕೇಂದ್ರ, ಕೃವಿವಿ, ಧಾರವಾಡ



ಕೃಷಿ ವಿಶ್ವವಿದ್ಯಾಲಯ, ಧಾರವಾಡ


# ಕುರಿಗಳಲ್ಲಿ ಬರುವ ಪ್ರಮುಖ ರೋಗಗಳು ಮತ್ತು ಹತೋಟಿ ಕ್ರಮಗಳು




ಐ.ಸಿ.ಎ.ಆರ್.-ಕೃಷಿ ವಿಜ್ಞಾನ ಕೇಂದ್ರ
ಹನುಮನಮಟ್ಟಿ 581 115
ತಾ: ರಾಣೇಬೆನ್ನೂರು, ಜಿ: ಹಾವೇರಿ

ಸೆಪ್ಟೆಂಬರ್ - 2014 ಪ್ರತಿಗಳು:1000

## ಕುರಿಗಳಲ್ಲಿ ನೀಲಿ ನಾಲಿಗೆ





ಇದು ವೈರಾಣುವಿನಿಂದಾಗುವ ಖಾಯಿಲೆ. ಈ ವೈರಾಣುವು ಕ್ಯೂಲಿಕಾಯಿಡ್ಸ್ ಕುರುಡು ನೊಣಗಳಿಂದ ಹರಡಲ್ಪಡುತ್ತದೆ. ಈ ರೋಗವು ಮಳೆಗಾಲ ಅಥವಾ ಅನಂತರ ಕಂಡುಬರುತ್ತದೆ. ಜೌಗು ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

**ರೋಗ ಲಕ್ಷಣಗಳು:** ರೋಗ ಪೀಡಿತ ಕುರಿಗಳಲ್ಲಿ ಹೆಚ್ಚು ಜ್ವರವಿದ್ದು, ತುಟಿ, ಗದ್ದ ಹಾಗೂ ಕಿವಿಗಳಲ್ಲಿ ಊತ ಕಾಣಿಸಿಕೊಳ್ಳುವುದು. ಬಾಯಲ್ಲಿ ಜೊಲ್ಲು ಸೋರುವಿಕೆ, ನಾಲಿಗೆ ನೀಲಿ ಬಣ್ಣ ಕಾಣುವುದು, ಕಾಲು ಕುಂಟುವಿಕೆ ಮತ್ತು ಉಣ್ಣೆ ಉದುರುವಿಕೆ ಇರುತ್ತದೆ. ಸಾಮಾನ್ಯವಾಗಿ ಶೇಕಡಾ 20 ರಿಂದ 30 ಕುರಿಗಳಲ್ಲಿ ಈ ರೋಗ ಕಂಡುಬರುತ್ತದೆ. ಆದರೆ ಇತರೆ ಸೋಂಕು ರೋಗಗಳಿಂದ ಹಾಗೂ ಆಹಾರ ಸೇವನೆ ಮಾಡಲಾಗದೆ ಕುರಿಗಳು ಸಾಯುತ್ತವೆ.

**ಚಿಕಿತ್ಸೆ:** ಈ ರೋಗ ಕಂಡು ಬಂದಾಗ ರೋಗಗ್ರಸ್ಥ ಕುರಿಗಳನ್ನು ಪ್ರತ್ಯೇಕಿಸಬೇಕು. ಕೂಡಲೇ ಪಶುವೈದ್ಯರ ಸಲಹೆಯನ್ನು ಪಡೆದು ಔಷಧೋಪಚಾರ ಮಾಡಿಸಬೇಕು. ಈ ರೋಗದಲ್ಲಿ ಕುರಿಗಳ ಆರೈಕೆಯೇ ಮುಖ್ಯ. ಆದುದರಿಂದ ರೋಗಗ್ರಸ್ಥ ಕುರಿಗಳಿಗೆ ಔಷಧೋಪಚಾರಗಳ ಜೊತೆಗೆ ಅವುಗಳಿಗೆ ರಾಗಿ ಗಂಜಿ, ಮೆತ್ತನೆಯ ಹುಲ್ಲು ಹಾಗೂ ಸೊಪ್ಪನ್ನು ನೀಡಬೇಕು.

**ನಿಯಂತ್ರಣ:** ಈ ರೋಗಕ್ಕೆ ಲಸಿಕೆಯು ಸಂಶೋಧನೆಯ ಹಂತದಲ್ಲಿರುವುದರಿಂದ ಮುಂಜಾಗ್ರತಾ ಕ್ರಮಗಳು ಮುಖ್ಯ. ಇವುಗಳೆಂದರೆ, ಕುರಿಗಳನ್ನು ಮಳೆಗಾಲದಲ್ಲಿ ಮುಂಜಾನೆ ಮತ್ತು ಮುಸ್ಸಂಜೆಯಲ್ಲಿ ತಗ್ಗುಪ್ರದೇಶದಲ್ಲಿ ಮೇಯಿಸಬಾರದು ಹಾಗೂ ಮಳೆಗಾಲದಲ್ಲಿ ಮತ್ತು ಚಳಿಗಾಲದಲ್ಲಿ ಉಣ್ಣೆ ಕತ್ತರಿಸಬಾರದು. ಇದಲ್ಲದೆ ನೀಲಿನಾಲಿಗೆ ರೋಗ ಹರಡುವ ಸೊಳ್ಳೆ, ನೊಣ ಮುಂತಾದ ಕೀಟಗಳ ಹಾವಳಿಯಿಂದ ಕುರಿಗಳನ್ನು ರಕ್ಷಿಸಬೇಕು. ಇದಕ್ಕಾಗಿ 80 ಮಿ.ಲೀ. ಸೀಮೆಣ್ಣೆ, 10 ಗ್ರಾಂ. ನುಸಿ ಗುಳಿಗೆ, 5 ಮಿ.ಲೀ. ನೀಲಗಿರಿ ತೈಲ ಹಾಗೂ 5 ಮಿ.ಲೀ. ಬೇವಿನ ಎಣ್ಣೆಯನ್ನು ಮಿಶ್ರಣ ಮಾಡಿ, ದ್ರಾವಣ ತಯಾರಿಸಿ, ಕಣ್ಣನ್ನು ಹೊರತುಪಡಿಸಿದಂತೆ ಕುರಿಯ ದೇಹಕ್ಕೆ ಸಿಂಪಡಿಸಬೇಕು. ಇದೇ ಮಿಶ್ರಿತ ದ್ರಾವಣವನ್ನು ಕುರಿ ರೊಪ್ಪಕ್ಕೂ ಸಹ ಸಿಂಪಡಿಸಬಹುದು. ಆದರೆ ಈ ದ್ರಾವಣವನ್ನು ಮೇವು ಮತ್ತು ನೀರಿಗೆ ಸಿಂಪಡಿಸದಂತೆ ಎಚ್ಚರ ವಹಿಸಬೇಕು. ಮೇಲ್ಕಂಡ ಈ ಎಲ್ಲಾ ನಿಯಂತ್ರಣ ಕ್ರಮಗಳಿಂದ ಕುರಿಗಳಿಗೆ ನೀಲಿ ನಾಲಿಗೆ ರೋಗ ತಾಗದಂತೆ ನಿಯಂತ್ರಿಸಬಹುದಾಗಿದೆ.

## ಕುರಿ ಸಿಡುಬು (ಕುರಿ ಮೈಲಿ, ದೇವಿ, ಅಮ್ಮ)



ಈ ರೋಗವು ವೈರಾಣುವಿನಿಂದ ಹರಡಲ್ಪಡುತ್ತದೆ. ಇದು ಒಂದು ಸಾಂಕ್ರಾಮಿಕ ರೋಗ. ವೈರಾಣುವು ಗಾಳಿ, ಗೊಣ್ಣೆ, ಚರ್ಮದ ಹೊಟ್ಟು (ಬೊಬ್ಬೆ) ಜೊಲ್ಲಿನಿಂದ ಹಾಗೂ ರೋಗಗ್ರಸ್ಥ ಕುರಿಗಳ ಸಂಪರ್ಕದ ವಸ್ತುಗಳು ಹಾಗೂ ಜನರಿಂದ ಹರಡುತ್ತದೆ.

**ರೋಗ ಲಕ್ಷಣಗಳು:** ರೋಗಗ್ರಸ್ಥ ಕುರಿಗಳಲ್ಲಿ ಜ್ವರ, ಕಣ್ಣಲ್ಲಿ ನೀರು ಸೋರುವಿಕೆ, ಮೂಗಲ್ಲಿ ಗೊಣ್ಣೆ ಹಾಗೂ ಬಾಯಲ್ಲಿ ಜೊಲ್ಲು ಸೋರುವಿಕೆ ಕಂಡುಬರುತ್ತದೆ. ನಂತರ ಬಾಲದ ಬುಡ, ಕಣ್ಣಿನ ಸುತ್ತ, ಕೆಚ್ಚಲು, ತುಟಿಗಳ ಮೇಲೆ ಮತ್ತು ತೊಡೆಗಳ ಚರ್ಮದ ಮೇಲೆ ಬೊಕ್ಕೆಗಳು ಕಾಣಿಸಿಕೊಳ್ಳುತ್ತವೆ. ಈ ಬೊಕ್ಕೆಗಳು, ನಂತರ ಇತರೆ ಸೋಂಕಿನಿಂದ ಹುಣ್ಣಾಗಿ ಮಾರ್ಪಾಡಾಗುತ್ತವೆ. ಪುಪ್ಪಸ ಹಾಗೂ ಶ್ವಾಸನಾಳಗಳಲ್ಲಿ ಬೊಕ್ಕೆಗಳು ಕಂಡುಬಂದಲ್ಲಿ, ಕೆಮ್ಮು ಕಾಣಿಸಿಕೊಳ್ಳಬಹುದು. ಕುರಿ ಮರಿಗಳಲ್ಲಿ ರೋಗ ಉಲ್ಬಣ ಹೆಚ್ಚಾಗಿ ಕಂಡುಬರುತ್ತದೆ. ರೋಗಗ್ರಸ್ಥ ಕುರಿಗಳಲ್ಲಿ ಶೇಕಡ 50 ಕುರಿಗಳು ಸಾಯುತ್ತವೆ. ಗಬ್ಬದ ಕುರಿಗಳು ಕಂದು ಹಾಕಬಹುದು.

**ಚಿಕಿತ್ಸೆ:** ರೋಗಗ್ರಸ್ಥ ಕುರಿಗಳನ್ನು ಮಂದೆಯಿಂದ ಬೇರ್ಪಡಿಸಬೇಕು. ತಕ್ಷಣ ಪಶುವೈದ್ಯರನ್ನು ಸಂಪರ್ಕಿಸಿ, ಸೂಕ್ತ ಔಷಧೋಪಚಾರ ಮಾಡಿಸಬೇಕು.

**ಮುಂಜಾಗ್ರತಾ ಕ್ರಮ:** ರೋಗ ತಡೆಗಟ್ಟಲು ಕುರಿಗಳಿಗೆ ಬೇಸಿಗೆ ಕಾಲಕ್ಕೆ ಮುಂಚೆಯೇ ಕುರಿ ಸಿಡುಬು ಲಸಿಕೆ ಹಾಕಿಸಬೇಕು.

## ಕುರಿಗಳಲ್ಲಿ ದೊಡ್ಡರೋಗ ಮತ್ತು ಪಿ.ಪಿ.ಆರ್. ರೋಗ (ಹಿರೇಬೇನೆ)





ಇದು ವೈರಾಣುಗಳಿಂದ ಬರುವ ಖಾಯಿಲೆ. ಈ ರೋಗವು ಕುರಿ ಮತ್ತು ಮೇಕೆಗಳಿಗೆ ಹರಡುವ ಸಾಂಕ್ರಾಮಿಕ ರೋಗ. ಈ ರೋಗ ಎಲ್ಲ ಋತುಗಳಲ್ಲೂ ಕಂಡುಬರುವುದು.

**ರೋಗ ಲಕ್ಷಣಗಳು**

ರೋಗಗ್ರಸ್ಥ ಕುರಿಗಳಲ್ಲಿ ಅತಿಯಾದ ಜ್ವರವಿದ್ದು ಕಣ್ಣು ಕೆಂಪಾಗಿ ನೀರು ಸೋರುತ್ತದೆ, ನಂತರ ಗೀಜು ಕಟ್ಟುವಿಕೆ ಕಂಡುಬರುತ್ತದೆ. ಬಾಯಲ್ಲಿ ಹುಣ್ಣಾಗಿ ನೊರೆಯುಕ್ತ ಜೊಲ್ಲನ್ನು ಸುರಿಸುತ್ತಿರುತ್ತವೆ. ಕುರಿಗಳು ಮೇವು ಬಿಟ್ಟು ನಿಶ್ಶಕ್ತಿಯಿಂದ ಮಂಕಾಗುತ್ತವೆ. ಪುಪ್ಪಸ ರೋಗದಿಂದ ಉಸಿರಾಟಕ್ಕೆ ತೊಂದರೆಯಾಗುತ್ತದೆ. ಜ್ವರ ಕಡಿಮೆಯಾಗುತ್ತಿದ್ದಂತೆ ಭೇದಿ ಅಥವಾ ಆಮಶಂಕೆ ಕಾಣಿಸಿ ನಿತ್ರಾಣಗೊಂಡು ಸಾಯುತ್ತವೆ.

**ಚಿಕಿತ್ಸೆ ಮತ್ತು ನಿಯಂತ್ರಣ**

1. ರೋಗಗ್ರಸ್ಥ ಪ್ರಾಣಿಗಳು ಕಂಡುಬಂದರೆ ಅವುಗಳನ್ನು ಪ್ರತ್ಯೇಕಿಸಿ ಪಶುವೈದ್ಯರ ಸಲಹೆ ಪಡೆಯಬೇಕು.
2. ರೋಗ ನಿಯಂತ್ರಿಸಲು ಪಶುವೈದ್ಯರ ಸಹಾಯದಿಂದ ದೊಡ್ಡರೋಗ ವರ್ಷಕ್ಕೊಮ್ಮೆ ಲಸಿಕೆ ಹಾಕಿಸಬೇಕು.
3. ವರ್ಷಕ್ಕೊಮ್ಮೆ ಮುಂಜಾಗ್ರತಾ ಕ್ರಮವಾಗಿ ಪಿ.ಪಿ.ಆರ್. ರೋಗದ ಲಸಿಕೆಯನ್ನು ಎಲ್ಲಾ ಕುರಿಗಳಿಗೆ ನೀಡಬೇಕು. ಇದರಿಂದ ರೋಗವನ್ನು ತಡೆಗಟ್ಟಬಹುದು.

## ಕಾಲು ಮತ್ತು ಬಾಯಿ ಬೇನೆ (ಫುಟ್ ಅಂಡ್ ಮೌತ್ ಕಾಯಿಲೆ)





ಇದು ವೈರಾಣುವಿನಿಂದ ಹರಡಲ್ಪಡುವ ಸಾಂಕ್ರಾಮಿಕ ರೋಗ. ಬೇಸಿಗೆಯಲ್ಲಿ ಸಾಮಾನ್ಯವಾಗಿ ಕಾಣಬರುವ ರೋಗ. ಎಲ್ಲಾ ವಯಸ್ಸಿನ, ಎಲ್ಲಾ ಜಾತಿಯ ಕುರಿಗಳಲ್ಲಿ ಇದು ಕಂಡುಬರುತ್ತದೆ. ರೋಗಗ್ರಸ್ಥ ಕುರಿಗಳ ಸಂಪರ್ಕ, ಅವುಗಳ ಜೊಲ್ಲು, ಸಿಂಬಳ, ದೂಷಿತ ಹುಲ್ಲು ಇವುಗಳ ಮುಖಾಂತರ ಇದು ಹರಡುತ್ತದೆ.

**ರೋಗ ಲಕ್ಷಣಗಳು:**

ರೋಗಗ್ರಸ್ಥ ಕುರಿಗಳಲ್ಲಿ ಜ್ವರ ಕಾಣಿಸಿಕೊಳ್ಳುವುದು ಹಾಗೂ ಜೊಲ್ಲು ಸೋರುವಿಕೆ ಕಂಡುಬರುವುದು. ಕಾಲಿನ ಗೊರಸುಗಳ ಮಧ್ಯೆ ದ್ರವ ತುಂಬಿದ ಗುಳ್ಳೆಗಳು ಕಾಣಿಸಿಕೊಳ್ಳಬಹುದು, ಆದರೆ ದನಗಳ ಬಾಯಲ್ಲಿ ಕಂಡುಬರುವ ಬೊಕ್ಕೆ, ಗುಳ್ಳೆಗಳ ತೀವ್ರತೆ ಇವುಗಳಲ್ಲಿ ಇರುವುದಿಲ್ಲ. ಕೆಚ್ಚಲ ಮೇಲೆ ಕೂಡ ಇದೇ ತರಹದ ಗುಳ್ಳೆಗಳು ಕಾಣಿಸಿಕೊಳ್ಳಬಹುದು.

**ಚಿಕಿತ್ಸೆ:**

1. ರೋಗಗ್ರಸ್ಥ ಕುರಿಗಳನ್ನು ಬೇರ್ಪಡಿಸಿ ಅವುಗಳಿಗೆ ಪಶುವೈದ್ಯರಿಂದ ಸೂಕ್ತ ಔಷಧೋಪಚಾರ ಮಾಡಿಸಬೇಕು.
2. ರೋಗಗ್ರಸ್ಥ ಕುರಿಗಳ ಬಾಯಿ ಮತ್ತು ಕಾಲುಗಳನ್ನು ಶೇಕಡಾ 4ರ ಬಟ್ಟೆ ಸೋಡಾ (ಸೋಡಾಕಾರ್ಬ್) ದ್ರಾವಣದಿಂದ ತೊಳೆಯಬೇಕು.
3. ದನ ಹಾಗೂ ಎಮ್ಮೆಗಳಲ್ಲಿ ಈ ರೋಗ ಕಂಡುಬಂದಾಗ ಕುರಿಗಳನ್ನು ಇವುಗಳಿಂದ ದೂರವಿಡಬೇಕು.
4. ಪಶುವೈದ್ಯರ ಸಲಹೆ ಪಡೆದು ವರ್ಷಕ್ಕೊಮ್ಮೆ ಈ ರೋಗದ ವಿರುದ್ಧ ಲಸಿಕೆ ನೀಡಬೇಕು.

## ಕುರಿಗಳಲ್ಲಿ ಗಂಟಲು ಬೇನೆ (ಗಳಲೆ ರೋಗ)

ಈ ರೋಗವು ವಿಷಾಣು ಜೀವಿಗಳಿಂದ ಹರಡಲ್ಪಡುವ ಒಂದು ಸಾಂಕ್ರಾಮಿಕ ರೋಗ, ಕಲುಷಿತ ನೀರು, ಆಹಾರ, ರೋಗಗ್ರಸ್ಥ ಕುರಿಗಳ ಸಂಪರ್ಕದಿಂದ ಒಂದು ಕುರಿಯಿಂದ ಇನ್ನೊಂದು ಕುರಿಗೆ ಹರಡುವುದು. ಮಳೆಗಾಲದ ಪ್ರಾರಂಭದಲ್ಲಿ ಅಥವಾ ತಂಪು ಹವೆಯಲ್ಲಿ ಕುರಿಗಳನ್ನು ಸ್ಥಳದಿಂದ ಸ್ಥಳಕ್ಕೆ ಸಾಗಣೆ ಮಾಡುವುದರಿಂದ ಪ್ರಯಾಸಕ್ಕೆ ಸಿಕ್ಕಿ ಈ ರೋಗದಿಂದ ನರಳುವುವು.

**ರೋಗ ಲಕ್ಷಣಗಳು:** ಕುರಿಗಳು ಮೇಯುವುದನ್ನು ಬಿಡುತ್ತವೆ. ಒಮ್ಮೊಮ್ಮೆ ಭೇದಿ ಅಥವಾ ರಕ್ತ ಮಿಶ್ರಿತ ಭೇದಿ ರೋಗಗ್ರಸ್ಥ ಕಾಣಬಹುದು. ಗಬ್ಬದ ಕುರಿಗಳು ಕಂದು ಹಾಕಬಹುದು. ಜ್ವರವಿರುವುದಲ್ಲದೆ ಉಸಿರಾಟಕ್ಕೆ ತೊಂದರೆ ಹೆಚ್ಚಾಗುತ್ತದೆ. ಆಹಾರವಿಲ್ಲದೆ 2–3 ದಿನಗಳಲ್ಲಿ ಕುರಿಗಳು ಸಾವನ್ನಪ್ಪುವವು.

**ಚಿಕಿತ್ಸೆ ಮತ್ತು ಮುಂಜಾಗ್ರತಾ ಕ್ರಮ:** ಈ ರೋಗ ಕಂಡುಬಂದಾಗ ಕೂಡಲೇ ಪಶು ವೈದ್ಯರನ್ನು ಸಂಪರ್ಕಿಸಿ ಸೂಕ್ತ ಔಷಧೋಪಚಾರದಿಂದ ಅವುಗಳನ್ನು ಗುಣಪಡಿಸಬಹುದು. ಮುಂಜಾಗ್ರತೆಗಾಗಿ ಗಳಲೆ ರೋಗ ಲಸಿಕೆಯನ್ನು ಕುರಿಗಳಿಗೆ ಮಳೆಗಾಲಕ್ಕೆ ಮುಂಚೆ ಹಾಕಿಸಿದರೆ ರೋಗವನ್ನು ತಡೆಗಟ್ಟಬಹುದು.

## ಕುರಿಗಳಲ್ಲಿ ಕರಳುಬೇನೆ (ಎಂಟಿರೋಟಾಕ್ಸೀಮಿಯ)

ಈ ರೋಗವು ಕ್ಲಾಸ್ಟ್ರಿಡಿಯಂ ಜಾತಿಗೆ ಸೇರಿದ ಬ್ಯಾಕ್ಟೀರಿಯಾ ಹರಡುತ್ತದೆ. ಆರೋಗ್ಯವಂತ ಮತ್ತು ಚೆನ್ನಾಗಿ ಮೆಯುತ್ತಿರುವ ವಯಸ್ಕ ಹಾಗೂ ಮರಿಗಳು ಈ ರೋಗಕ್ಕೆ ಬೇಗ ತುತ್ತಾಗುತ್ತವೆ. ಈ ರೋಗಕ್ಕೆ ಕಾರಣ ಕುರಿಗಳು ಅವಶ್ಯಕತೆಗಿಂತ ಹೆಚ್ಚಾಗಿ ಹಸಿರು ಮೇವು ಮೇಯ್ದಾಗ, ಕರುಳಿನಲ್ಲಿ ಸತ್ವಯುತ ಆಹಾರ ಅಧಿಕವಾಗಿ ವಿಷಾಣುಗಳು ಅತಿಯಾಗಿ ಬೆಳೆಯಲು ಕಾರಣವಾಗುತ್ತದೆ. ಈ ವಿಷಾಣುಗಳ ವಿಷದಿಂದ ಕುರಿಗಳು ಸಾಯುತ್ತವೆ. ಈ ರೋಗವು ಸಾಧಾರಣವಾಗಿ ಮಳೆಗಾಲದಲ್ಲಿ ಕಾಣಿಸಿಕೊಳ್ಳುತ್ತದೆ.

**ರೋಗ ಲಕ್ಷಣಗಳು:** ಚೆನ್ನಾಗಿ ಮೇಯುತ್ತಿರುವ ಆರೋಗ್ಯವಂತ ಕುರಿಗಳು ಒಮ್ಮೆಲೆ ಸುತ್ತ ತಿರುಗಿ ಕೆಳಗೆ ಬಿದ್ದು ಸಾಯುವುವು. ತೀವ್ರತರ ರೋಗದಲ್ಲಿ ಈ ರೋಗಕ್ಕೆ ಚಿಕಿತ್ಸೆ ಮಾಡುವಷ್ಟು ಸಮಯವಿರುವುದಿಲ್ಲ. ರೋಗಗ್ರಸ್ಥ ಕುರಿಗಳಲ್ಲಿ ಹಲ್ಲು ಕಡಿಯುವಿಕೆ, ತಲೆ ಒಂದು ಕಡೆ ತಿರುಗಿಸುವುದು ಹಾಗೂ ಒಮ್ಮೊಮ್ಮೆ ಭೇದಿ ಸಹ ಕಾಣಬರುವುದು. ತ್ರಾಣವಿಲ್ಲದೆ ಬಿದ್ದು, ಕಾಲುಗಳನ್ನು ಜೋರಾಗಿ ಆಡಿಸಿ ಸಾವನ್ನಪ್ಪುವುವು.

**ಮುಂಗಾಗ್ರತಾ ಕ್ರಮ:** ವರ್ಷಕ್ಕೊಮ್ಮೆ ಮಳೆಗಾಲಕ್ಕೆ ಮುಂಚೆ ಮೂರು ತಿಂಗಳು ಮೇಲ್ಪಟ್ಟ ಕುರಿಗಳಿಗೆ ಲಸಿಕೆ ಹಾಕಿಸಬೇಕು. ಮೊದಲನೆ ವರ್ಷದಲ್ಲಿ ಎರಡು ಬಾರಿ ಹದಿನಾಲ್ಕು ದಿನಗಳ ಅಂತರದಲ್ಲಿ, ನಂತರ ವರ್ಷಕ್ಕೊಮ್ಮೆ ಲಸಿಕೆ ಹಾಕಿಸಬೇಕು. ಈ ರೋಗ ಕಂಡುಬಂದಾಗ ಕುರಿ ಮಂದೆಯನ್ನು ಒಣ ಹುಲ್ಲು ಇರುವ ಪ್ರದೇಶಕ್ಕೆ ಮೇಯಲು ಸಾಗಿಸಬೇಕು.



